ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು – 560 023.

**ದಿನಾಂಕ: 26-01-2023 ರಂದು ಆಚರಿಸಿದ**

# ಗಣರಾಜ್ಯೋತ್ಸವದ

## ಸಚಿತ್ರಗಳ ಪಕ್ಷಿ ನೋಟ

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ಭಾರತದ ಗಣ ರಾಜ್ಯೋತ್ಸವ ಕಾರ್ಯಕ್ರಮವನ್ನು ದಿನಾಂಕ: 26-01-2023 ರಂದು ಗುರುವಾರದ ಬೆಳಿಗ್ಗೆ 09-00 ಗಂಟೆಯಿಂದ ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಂಘದ ಆವರಣದಲ್ಲಿರುವ ಧ್ವಜ ಸ್ಥಂಭದ ಬಳಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಸಂವಿಧಾನ ಶಿಲ್ಪಿ ಶ್ರೀ ಡಾ॥ ಬಿ. ಆರ್. ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.











ಪ್ರತೀತಿಯಂತೆ ಸದಸ್ಯರಾದ ಶ್ರೀ. ಹೆಚ್.ಎಸ್. ವೆಂಕಟೇಶ್ ರವರ ದೇಶ ಭಕ್ತಿ ಗೀತೆಯ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.



ಶ್ರೀಯುತ ಬಿ.ಎನ್. ಶಾಮಣ್ಣ, ಜಂಟಿ ಕಾರ್ಯದರ್ಶಿ, ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು ರವರು ಆಗಮಿಸಿದ್ದ ಎಲ್ಲ ಸದಸ್ಯರು, ಇನ್ನಿತರರನ್ನು ಹಾರ್ದಿಕವಾಗಿ ಸ್ವಾಗತಿಸಿದರು.





ಹಿರಿಯ ಸದಸ್ಯರೂ ಸೇರಿದಂತೆ ಹೆಚ್ಚಿನ ಸಂಖೆಯಲ್ಲಿ ಗಣರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮಕ್ಕೆ ಹಾಜರಾಗಿ ತಮ್ಮ ದೇಶ ಭಕ್ತಿಯನ್ನು ಮೆರೆದರು.



ಶ್ರೀಯುತ ಬಿ. ಕೆ. ಶಿವರಾಮ್, ಅಧ್ಯಕ್ಷರು, ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು ಹಾಗೂ ರವರು ಸಂಘದ ಕಾರ್ಯಕಾರೀ ಸಮಿತಿಯ ಸದಸ್ಯರು ಹಾಗೂ ಹಿರಿಯ ಸದಸ್ಯರೊಡಗೂಡಿ ಧ್ವಜಾರೋಹಣವನ್ನು ನೆರವೇರಿಸಿದರು.

ಹಾಜರಿದ್ದವರೆಲ್ಲರೂ ರಾಷ್ಟ್ರ ಧ್ವಜಕ್ಕೆ ವಂದನೆ ಸಲ್ಲಿಸಿದರು. ಧ್ವಜ ವಂದನೆ ಜೊತೆಗೆ ರಾಷ್ಟ್ರಗೀತೆಯನ್ನು ನುಡಿಸಲಾಯಿತು.



ಸದಸ್ಯರಾದ ಶ್ರೀ ಎಂ. ಎನ್. ಮಂಜೇಗೌಡ ರವರು ತಮ್ಮ ಸ್ವರಚಿತ ದೇಶ ಭಕ್ತಿ ಕವನವನ್ನು ವಾಚಿಸಿದರು.



ಮತ್ತೊಬ್ಬ ಹಿರಿಯ ಸದಸ್ಯರಾದ ಶ್ರೀಯುತ ಸಿ. ಮೋಹನ್ ರವರು ಪ್ರಸ್ತುತ ಸಮಾಜದಲ್ಲಿ ಎದುರಿಸಬೇಕಾದ ಸವಾಲುಗಳ ಬಗ್ಗೆ ಚುಟುಕಾಗಿ ತಮ್ಮ ದೇಶ ಭಕ್ತಿ ಸಂದೇಶವನ್ನು ಸಾರಿದರು..





ಧ್ವಜಾರೋಹಣ ಹಾಗೂ ಧ್ವಜ ವಂದನೆಯ ನಂತರ ಹಿರಿಯ ಸದಸ್ಯರಾದ ಶ್ರೀಯುತ ಎಸ್. ಪಿ. ನಾಯಕ್ ರವರು ತಮ್ಮ ಸುದೀರ್ಘವಾದ ಭಾಷಣದಲ್ಲಿ ಗಣರಾಜ್ಯದ ಮಹತ್ವ ಹಾಗೂ ಭಾರತೀಯ ಸಂವಿಧಾನದ ಬಗ್ಗೆ ಮನವರಿಕೆ ಮಾಡಿಕೊಟ್ಟರು.





ಶ್ರೀಯುತ ಹೆಚ್.ಟಿ. ಕೃಷ್ಣಪ್ಪ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು ರವರು ಕಾರ್ಯಕ್ರಮಕ್ಕೆ ಆಗಮಿಸಿದ್ದ ಹಿರಿಯ/ಕಿರಿಯ ಸದಸ್ಯರೂ ಸೇರಿದಂತೆ ಎಲ್ಲರಿಗೂ ಹೃತ್ಪೂರ್ವಕವಾಗಿ ವಂದನಾರ್ಪಣೆ ಸಲ್ಲಿಸಿದರು.



ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕಾರೀ ಸಮಿತಿಯ ಸದಸ್ಯರಾದ ಶ್ರೀಯುತ ಜಿ. ಎ. ಜಗದೀಶ್ ರವರು ತಮ್ಮ ನಿರರ್ಗಳ ಮಾತಿನ ಧಾಟಿಯಲ್ಲಿ ಇಡೀ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.

ತದನಂತರ ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀಯುತ ಬಿ. ಕೆ. ಶಿವರಾಮ್ ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಎಲ್ಲರೂ ಸೇರಿ ಸಂಘವನ್ನು ಮುನ್ನಡೆಸುವ ಬಗ್ಗೆ ಎಲ್ಲರ ಸಹಕಾರವನ್ನು ಕೋರಿದರು.





ತದನಂತರ ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀಯುತ ಬಿ. ಕೆ. ಶಿವರಾಮ್ ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಎಲ್ಲರೂ ಸೇರಿ ಸಂಘವನ್ನು ಮುನ್ನಡೆಸುವ ಬಗ್ಗೆ ಎಲ್ಲರ ಸಹಕಾರವನ್ನು ಕೋರಿದರು.



ಸಂಘದ ವತಿಯಿಂದ ಎಲ್ಲರಿಗೂ ವ್ಯವಸ್ಥೆ ಮಾಡಲಾಗಿದ್ದ ಲಘು ಉಪಹಾರದೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಗಿರುತ್ತದೆ.













ಸಂಘವು ಆಯೋಜಿಸಿದ್ದ ಸರಳ ಸಮಾರಂಭಕ್ಕೆ ಹಿರಿಯ/ಕಿರಿಯ ಸದಸ್ಯರೂ ಸೇರಿದಂತೆ ಒಟ್ಟು ಸುಮಾರು 60 ಮಂದಿ ಹಾಜರಿದ್ದು ಸಮಾರಂಭದ ಸಂಭ್ರಮಕ್ಕೆ ಶೋಭೆ ತಂದು ಯಶಸ್ವಿಯಾಗಲು ಸಹಕರಿಸಿದರು.

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ,
ಬೆಂಗಳೂರು – 560 023.

* * * * *